# ಟಾಟಾ ಮೋಟರ್ಸ್ ವಾಹನ ಪ್ರದರ್ಶನ

**ಬೆಂಗಳೂರು:** ಸಾರ್ವಜನಿಕ ಸಾರಿಗೆ ಸೇವೆಗಾಗಿ ಟಾಟಾ ಮೋಟಾರ್ಸ್ ವತಿಯಿಂದ ಅತಿದೊಡ್ಡ 'ಬಿ2ಬಿ' ಬಸ್ ಮತ್ತು ಕೋಚ್ ಪ್ರದರ್ಶನವಾದ 'ಬಸ್ ವರ್ಲ್ಡ್ ಇಂಡಿಯಾ-2018'ರಲ್ಲಿ ಹೊಸ ಐದು ಸಾರ್ವಜನಿಕ ಸಾರಿಗೆ ವಾಹನಗಳನ್ನು ಪ್ರದರ್ಶಿಸಲಾಯಿತು.

ಈ ವೇಳೆ ಟಾಟಾ ಮೋಟಾರ್ಸ್ ಯಾಂತ್ರಿಕ ವಾಣಿಜ್ಯ ವಾಹನಗಳ ಉತ್ಪಾದನಾ ಲೈನ್ ಮುಖ್ಯಸ್ಥ ರೋಹಿತ್ ಶ್ರೀವಾಸ್ತವ ಮಾತನಾಡಿ, ಟಾಟಾ ಮೋಟಾರ್ಸ್‌ನ ಬಸ್‌ಗಳು ಉತ್ಕೃಷ್ಟತೆಯ ಮಾನದಂಡ ಮತ್ತು ಈ ಶ್ರೇಣಿಯಲ್ಲಿ ಭಾರತೀಯ ಮತ್ತು ಜಾಗತಿಕ ಪ್ರಯಾಣದ ಸ್ಥಿತಿಗಳಿಗೆ ಹೊಂದುವ ನಾವೀನ್ಯತೆಗಳನ್ನು ಅಳವಡಿಸಲಾಗಿದೆ.

ಅತ್ಯಾಧುನಿಕ ತಂತ್ರಜ್ಞಾನದ ಲಕ್ಷಣಗಳನ್ನು ಹೊಂದಿರುವ ಹೊಸ ಶ್ರೇಣಿಯ ಉತ್ಪನ್ನಗಳನ್ನು ಸರ್ವಜನಿಕರಿಗೆ ನೀಡುವ ಉದ್ದೇಶದಿಂದ ಈ ಸೇವೆ



ಆರಂಭಿಸಲಾಗಿದೆ. ಈ ಬಸ್ ಅಲ್ಟ್ರಾ ಎಸಿ 22 ಸೀಟರ್ ಪುಶ್ ಬ್ಯಾಕ್, ಸ್ಟಾರ್‌ಬಸ್ 12 ಸೀಟರ್, ಎಸಿ ಮ್ಯಾಕ್ಸಿ ಕ್ಯಾಬ್, ವಿಂಗರ್ 12 ಸೀಟರ್, ಟಾಟಾ 1,515 ಎಂಸಿವಿ ಸ್ಟಾಫ್ ಬಸ್ ಮತ್ತು ಇ ಮಾಗ್ನಾ ಇಂಟರ್ ಸಿಟಿ ಕೋಚ್ ಹೊಂದಿದೆ. ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ಈ ಹೊಸ ವಾಹನಗಳು ಉತ್ಕೃಷ್ಟ ವಿನ್ಯಾಸ, ಇಂಧನ ದಕ್ಷತೆ ಹೊಂದಿದೆ ಎಂದರು.